ಸತ್ರ ಪ್ರಕರಣ ಸಂಖ್ಯೆ:

| | |
|---|---|
| ಫ್ರಾಸಾ | 15 |
| ಚಾಸಾ | 17 |

ಕರ್ನಾಟಕ ಸರ್ಕಾರ (ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ:57)
ನಮೂನೆ ಸಂಖ್ಯೆ4
(ಸಿವಿಲ್)

**2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಬಳ್ಳಾಪುರ**

**ಸತ್ರ ಪ್ರಕರಣ ಸಂಖ್ಯೆ:47/2024**

**ದಿನಾಂಕ: 30.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಿತು.**

| | | |
|---|---|---|
| ಸಾಕ್ಷಿದಾರರ ಹೆಸರು | : | ಜಿ.ಎಂ.ಲೋಕೇಶ್ |
| ತಂದೆಯ ಹೆಸರು | : | ಲೇಟ್.ಮುನಿವೆಂಕಟಪ್ಪ |
| ವಯಸ್ಸು | : | 46 ವರ್ಷ |
| ಉದ್ಯೋಗ | : | ಹೆಚ್.ಸಿ.53 ಕೆಂಚಾರ್ಲ ಹಳ್ಳಿ ಪೋಲಿಸ್ ಠಾಣೆ |
| ವಾಸಸ್ಥಳ | : | ಚಿಂತಾಮಣಿ |

**ಮುಖ್ಯ ವಿಚಾರಣೆ: ಸಾರ್ವಜನಿಕ ಅಭಿಯೋಜಕರಿಂದ:-**

**1.** ನಾನು 2018 ರಿಂದ 2024 ರವರೆಗೆ ದಿಬ್ಬೂರಹಳ್ಳಿ ಪೊಲೀಸ್ ಠಾಣೆಯಲ್ಲಿ ಹೆಚ್.ಸಿ.53 ಆಗಿ ಕರ್ತವ್ಯ ನಿರ್ವಹಿಸಿದ್ದೇನೆ.

2. ಈ ಪ್ರಕರಣದಲ್ಲಿ ಚಾಸಾ-20 ನಂದಕುಮಾರ್ ವೃತ್ತ ನಿರೀಕ್ಷಕರು. ದಿನಾಂಕ 22.06.2023 ರಂದು ಆರೋಪಿಯ ಪತ್ತೆಗಾಗಿ ನನ್ನನು ಮತ್ತು ಠಾಣಾ ಸಿಬ್ಬಂಧಿ ಸಿ.ಹೆಚ್.ಸಿ186 ನರಸಿಂಹಯ್ಯ ಚಾಸಾ-18 ರವರನ್ನು ನೇಮಿಸಿದ್ದರು. ಅದರಂತೆ

ಸತ್ರ ಪ್ರಕರಣ ಸಂಖ್ಯೆ:

| | |
|---|---|
| ಫ್ರಾಸಾ | 15 |
| ಚಾಸಾ | 17 |

ನಾವುಗಳು ಗಂಜಿಗುಂಟೆ ಗ್ರಾಮಕ್ಕೆ ಹೋಗಿ ಬಾತ್ಮಿ ದಾರರನ್ನು ಸಂಪರ್ಕಿಸಿ ಆರೋಪಿ ದಾಹೂದ್ ಪಾಶಾ ಗಂಜಿಗುಂಟೆ ಬಸ್ ನಿಲ್ದಾಣದಲ್ಲಿ ಇರುವುದಾಗಿ ಖಚಿತ ಮಾಹಿತಿ ಬಂದ ಮೇರೆಗೆ ಬೆಳಿಗ್ಗೆ ಸುಮಾರು 06.30 ಗಂಟೆಯ ಸಮಯದಲ್ಲಿ ನಾವು ಆತನನ್ನು ವಶಕ್ಕೆ ಪಡೆದು, ಪ್ರಕರಣ ದಾಖಲಾಗಿರು ಬಗ್ಗೆ ತಿಳಿಸಿ , ನಂತರ ಆತನನ್ನು ಮಾನ್ಯ ವೃತ್ತ ನಿರೀಕ್ಷಕರ ಮುಂದೆ ಬೆಳಿಗ್ಗೆ 07.30 ಗಂಟೆಗೆ ಮುಂದಿನ ಕ್ರಮಕ್ಕೆ ವರದಿಯೊಂದಿಗೆ ಹಾಜರುಪಡಿಸಿರುತ್ತೇವೆ. ವರದಿಯನ್ನು ಮತ್ತು ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ವರದಿ ಮತ್ತು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿದ್ದು, ವರದಿಯನ್ನು ನಿಪಿ17 ಎಂದು , ಸದರಲ್ಲಿರುವ ಸಾಕ್ಷಿಯ ಸಹಿಯನ್ನು 17(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಆರ್.ಎ.ಕೆ. ವಕೀಲರಿಂದಃ**

**3.** ನಮಗೆ ವೃತ್ತ ನಿರೀಕ್ಷಕರು ಆರೋಪಿಯನ್ನು ಪತ್ತೆ ಹಚ್ಚಲು ಲಿಖಿತವಾಗಿ ಜ್ಞಾಪನ ನೀಡಿರುವುದಿಲ್ಲ. ನಿಪಿ17 ರಲ್ಲಿ ನನ್ನ ಸಹಿಯ ಕೆಳಗೆ ದಿನಾಂಕ ನಮೂದು ಮಾಡಲು ನನಗೆ ತೊಂದರೆ ಇರಲಿಲ್ಲ. ನಿಪಿ-17 ರಲ್ಲಿ 2022 ಎಂದು ನಮೂದು ಮಾಡುವುದನ್ನು 23 ಎಂದು ತಿದ್ದಿರುತ್ತೀರಿ ಎಂದರೆ ಸಾಕ್ಷಿ ಟೈಪಿಂಗ್ ಮಿಸ್ಟೇಕ್ ಇದ್ದುದ್ದರಿಂದ ತಿದ್ದಿರುತ್ತೇನೆ ಎಂದು ನುಡಿಯುತ್ತಾರೆ. ತಿದ್ದಿರುವ ಸ್ಥಳದಲ್ಲಿ ಸಣ್ಣ ಸಹಿ

ಮಾಡಲು ನನಗೆ ತೊಂದರೆ ಇರಲಿಲ್ಲ. ನಿಪಿ-17 ನ್ನು ಕಚೇರಿಯಲ್ಲಿ ಟೈಪ್ ಮಾಡಿರುತ್ತೇನೆ. ನನ್ನನು ಆರೋಪಿಯ ಪತ್ತೆಗಾಗಿ ನೇಮಕ ಮಾಡಿರಲಿಲ್ಲ. ಅದೇ ರೀತಿ ನಿಪಿ-17 ನ್ನು ನಾನು ತಯಾರಿಸಿರಲಿಲ್ಲ. ನಾನು ಮೇಲಾಧಿಕಾರಿಯ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

**(ದಿನಾಂಕಃ 30.01.2026 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓದಿ ಹೇ ಕೇ ಸರಿ ಇದೆ**

**ಸಹಿ/-**

**(ಕಾಂತರಾಜು.ಎಸ್.ವಿ.)**
**2 ನೇ ಹೆಚ್ಚುವರಿ ಜಿಲ್ಲಾ ಮತ್ತು (ವಿಶೇಷ) ಸತ್ರ ನ್ಯಾಯಾಧೀಶರು,**
**ಚಿಕ್ಕಬಳ್ಳಾಪುರ (ಕಾರ್ಯಸ್ಥಾನ ಚಿಂತಾಮಣಿ)**